ಆ) ಇ) ಮತ್ತು ಈ) ಹೌದು, 2004–05ನೇ ಸಾಲಿನಲ್ಲಿ ನ್ಯಾಯಮೂರ್ತಿ ಮುರುಗೋಡು ಸಮಿತಿ ವರದಿಯನ್ವಯ ವೃತ್ತಿಪರ ಕೋರ್ಸಗಳಿಗೆ ಶುಲ್ಕವನ್ನು ಪರಷ್ಕೃತಗೊಳಿಸಿ ನಿಗದಿಗೊಳಿಸಲಾಗಿರುತ್ತದೆ. ಪ್ರಸಕ್ತ ಸಾಲಿನಲ್ಲಿ ಸಾಮಾನ್ಯ ಪ್ರವೇಶ ಘಟಕದ ಮೂಲಕ 248 ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ವೈದ್ಯಕೀಯ 188 ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ದಂತ ವೈದ್ಯಕೀಯ ಹಾಗೂ 4283 ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳು ತಾಂತ್ರಿಕ ಕೋರ್ಸ್‌ಗಳಿಗೆ ಆಯ್ಕೆಯಾಗಿರುತ್ತಾರೆ. ಈ ವಿದ್ಯಾರ್ಥಿಗಳಿಗೆ ಶುಲ್ಕವನ್ನು ಪಾವತಿಸಲು ರೂ.1703.26 ಲಕ್ಷಗಳು ವಾರ್ಷಿಕವಾಗಿ ವೆಚ್ಚ ತಗಲುವುದರಿಂದ ಈ ಬಗ್ಗೆ ಅನುದಾನವನ್ನು ಬಿಡುಗಡೆಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ. ಸಮಾಜ ಕಲ್ಯಾಣ ಇಲಾಖೆಯು ಪರಿಶಿಷ್ಟ ಜಾತಿ ವಿದ್ಯಾರ್ಥಿಗಳ ಶುಲ್ಕ ಮರುಪಾವತಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವುದಿಲ್ಲ. ಪರಿಶಿಷ್ಟ ವರ್ಗಗಳಿಗೆ ಸಂಬಂಧಿಸಿದಂತೆ ಸಿಇಟಿ ಘಟಕದ ಕೋರಿಕೆಯಂತೆ ಕಳೆದ 3 ವರ್ಷಗಳಿಗೆ ಸಂಬಂಧಿಸಿದಂತೆ ಪೂರ್ಣ ಹಣವನ್ನು ಮುಂಗಡವಾಗಿ ನೀಡಲಾಗಿದೆ ಶುಲ್ಕ ಪಾವತಿಗೆ ಸಂಬಂಧಿಸಿದಂತೆ ಇಂತಹ ಪ್ರಕರಣಗಳು ಇರುವುದಿಲ್ಲ.

1818(1796) ಶ್ರೀ ಕಾರಜೋಳ ಗೋವಿಂದ್ ಮಕಟಪ್ಪ (ಮುಧೋಳ): ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಬ್ಬು ಬೆಳೆಗಾರರಿಗೆ 2003–2004ನೆಯ ಸಾಲಿನ ಪ್ರೋತ್ಸಾಹಧನ ಪ್ರತಿ ಟನ್ನಿಗೆ ರೂ.15.00 ಬಿಡುಗಡೆ ಮಾಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಣ ಬಿಡುಗಡೆ ಮಾಡಲು ವಿಳಂಬ ಮಾಡಲು ಕಾರಣವೇನು ಮತ್ತು ಎಷ್ಟು ದಿನಗಳಲ್ಲಿ ಬಿಡುಗಡೆ ಮಾಡಲಾಗುವುದು;

ಇ) ಬಿಡುಗಡೆ ಮಾಡಬೇಕಾದ ಒಟ್ಟು ಮೊತ್ತವೆಷ್ಟು?

ಶ್ರೀ ಎಲ್. ಅಮರೇಗೌಡ ಪಾಟೀಲ್ ಬಯ್ಯಾಪುರ(ಸಕ್ಕರೆ ಸಚಿವರು): ಅ) ಸರ್ಕಾರಿ ಆದೇಶ ಸಂಖ್ಯೆ ಸಿಐ 203 ಎಸ್‌ಜಿಎಫ್ 95 ದಿನಾಂಕ 13.10.1995ರನ್ವಯ, ಕಬ್ಬು ಬೆಳೆಗಾರರಿಗೆ ಪ್ರತಿ ಟನ್ನಿಗೆ ರೂ.15/–ರಂತೆ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ. ಈ ಬಾಬ್ತು ವಾಣಿಜ್ಯ ತೆರಿಗೆ ಆಯುಕ್ತರು 2003–04ನೇ ಸಾಲಿಗೆ (ದಿನಾಂಕ 21.08.2004ರವರೆಗೆ) ರೂ.17.76.70.253/–ಗಳನ್ನು ಬಿಡುಗಡೆ ಮಾಡಿದ್ದಾರೆ.

ಆ) ಹಣ ಬಿಡುಗಡೆ ಮಾಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಹಣ ಬಿಡುಗಡೆ ಮಾಡಿರುವುದರಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

1819(1797) ಶ್ರೀ ಕಾರಜೋಳ ಗೋವಿಂದ ಮಕಟಪ್ಪ (ಮುಧೋಳ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪರಿಶಿಷ್ಟ ಜಾತಿ ಜನಾಂಗದ ಬಡವರಿಗೆ ಭೂ ಒಡೆತನ ಯೋಜನೆಯಲ್ಲಿ ಖರೀದಿಸುವ ಭೂಮಿಯ ಬೆಲೆಯನ್ನು ನೀರಾವರಿ ಎಕರೆಗೆ ರೂ.60,000–00 ಮತ್ತು ಒಣ ಬೇಸಾಯ ಜಮೀನಿಗೆ 30,000–00 ನಿಗದಿ ಮಾಡಿರುವುದರಿಂದ ಉಳಿಮೆಗೆ ಯೋಗ್ಯವಾದ ಜಮೀನು ಸಿಗುವುದು ಸಾಧ್ಯವಾಗುತ್ತಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದರೆ ಸದ್ಯದ ಮಾರುಕಟ್ಟೆ ಬೆಲೆ ನಿಗದಿ ಮಾಡಿ ಮರು ಆದೇಶ ನೀಡಲು ಸರ್ಕಾರ ಸಿದ್ಧವಿದೆಯೇ?

ಡಾ. ವೈ. ನಾಗಪ್ಪ (ಸಮಾಜ ಕಲ್ಯಾಣ ಸಚಿವರು):

ಅ) ಬಂದಿದೆ.

ಆ) ಮಾರ್ಗಸೂಚಿ ಬೆಲೆಗಳಂತೆ ನಿಗದಿಪಡಿಸುವ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

1820(1941) ಶ್ರೀ ಕಟ್ಟಾಸುಬ್ರಹ್ಮಣ್ಯನಾಯ್ಡು : ಮಾನ್ಯ ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜನವರಿ 2004 ರಿಂದ ಇಲ್ಲಿಯವರೆಗೆ ಕೆ.ಐ.ಎ.ಡಿ.ಬಿ. ಬೆಂಗಳೂರು ಸುತ್ತಮುತ್ತ ಸ್ವಾಧೀನಪಡಿಸಿಕೊಂಡ ಜಮೀನಿನ ಪ್ರಮಾಣವೆಷ್ಟು?

ಆ) ಸದರಿ ಜಮೀನುಗಳನ್ನು ಯಾವ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಲಾಗಿದೆ.

ಇ) ಇವುಗಳನ್ನು ಯಾವ ಯಾವ ಕೈಗಾರಿಕೋದ್ಯಮಿಗಳಿಗೆ, ಕಾರ್ಖಾನೆಗಳಿಗೆ ನೀಡಲಾಗಿದೆ.

ಈ) ರೈತರಿಗೆ ಪರಿಹಾರವಾಗಿ ಪ್ರತಿಯೊಂದು ಭೂಸ್ವಾಧೀನದಲ್ಲೂ ಎಕರೆಗೆ ನೀಡಿದ ಹಣವೆಷ್ಟು?

ಉ) ಈ ಸ್ವಾಧೀನಪಡಿಸಿಕೊಂಡ ಜಮೀನಿನಿಂದ ಕೆ.ಐ.ಎ.ಡಿ.ಬಿ.ಗೆ ಬಂದ ವರಮಾನವೆಷ್ಟು?

ಊ) ರೈತರಿಗೆ ಕಡಿಮೆ ಬೆಲೆ ಪರಿಹಾರ ನೀಡಿ ಹೆಚ್ಚು ಬೆಲೆಗೆ ಕೈಗಾರಿಕೆಗಳಿಗೆ ಜಮೀನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಋ) 2004 ಜನವರಿಯಿಂದ ಭೂಸ್ವಾಧೀನಕ್ಕಾಗಿ ಪ್ರಕಟಣೆ ಹೊರಡಿಸಿ, ನಂತರ ಸ್ವಾಧೀನಪಡಿಸದೇ ಇರುವ ಜಮೀನುಗಳ ವಿವರ ನೀಡುವುದು.

ೠ) ಇದಕ್ಕೆ ಕಾರಣಗಳೇನು?

ಶ್ರೀ ಪಿ.ಜಿ.ಆರ್. ಸಿಂಧ್ಯ (ಭಾರೀ ಮತ್ತು ಮಧ್ಯಮ ಹಾಗೂ ಸಣ್ಣ ಕೈಗಾರಿಕಾ ಮತ್ತು ಮೂಲಭೂತ ಸೌಲಭ್ಯ ಅಭಿವೃದ್ಧಿ ಸಚಿವರು):

ಅ) ಜನವರಿ 2004ರಿಂದ ಇಲ್ಲಿಯವರೆಗೆ ಕೆ.ಐ.ಎ.ಡಿ.ಬಿ.ಯು ಬೆಂಗಳೂರು ನಗರ ಜಿಲ್ಲೆಯ ಬೆಂಗಳೂರು ಪೂರ್ವ, ಬೆಂಗಳೂರು ಉತ್ತರ, ಬೆಂಗಳೂರು ದಕ್ಷಿಣ ಹಾಗೂ ಆನೇಕಲ್ ತಾಲ್ಲೂಕುಗಳಲ್ಲಿ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮನಗರ ತಾಲ್ಲೂಕಿನಲ್ಲಿ ಒಟ್ಟು 654 ಎಕರೆ 34 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಂಡಿದೆ. ಇದಲ್ಲದೆ 1715 ಎಕರೆ 31 ಗುಂಟೆ ಜಮೀನನ್ನು ಕೈಗಾರಿಕಾ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಲು ಪ್ರಸ್ತಾಪಿಸಿ, ಈ ಸಂಬಂಧ ಕಲಂ 28(1)ರ ಅಡಿಯಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಲಾಗಿದ್ದು, ಈ ಜಮೀನುಗಳಿಗೆ ಸಂಬಂಧಿಸಿದ ಭೂಸ್ವಾಧೀನ ಪ್ರಕ್ರಿಯೆಯು ವಿವಿಧ ಹಂತಗಳಲ್ಲಿ ಇರುತ್ತದೆ.

ಆ) ಕೈಗಾರಿಕಾ ಉದ್ದೇಶಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲಾಗಿದೆ.

ಇ) ವಿವರಗಳನ್ನು ಅನುಬಂಧ 'ಅ' ರಲ್ಲಿ ಲಗತ್ತಿಸಿದೆ.

ಈ) ವಿವರಗಳನ್ನು ಅನುಬಂಧ 'ಆ' ರಲ್ಲಿ ಲಗತ್ತಿಸಿದೆ.

ಉ) ಏಕ ಘಟಕ ಸಂಕೀರ್ಣಗಳಿಗಾಗಿ (ಎಸ್‌ಯುಸಿ) ಸ್ವಾಧೀನಪಡಿಸಿದ ಜಮೀನುಗಳಿಗೆ ಜಮೀನಿನ ಬೆಲೆಯ ಮೇಲೆ ಐ.ಟಿ. ಉದ್ದಿಮೆದಾರರಿಂದ ಶೇಕಡ 22.1 ರಂತೆ ಸೇವಾ ಶುಲ್ಕವನ್ನು ಮಂಡಳಿಗೆ ಪಡೆಯಲಾಗಿರುತ್ತದೆ.